(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ದವರ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಒಂದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮರ ಕಳವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅವೆರ್ಲಾ ಪ್ರಿಂಟಾಗಿದೆ. ಆ ವಿಚಾರ ನಮ್ಮ ಪ್ರೊಸೀಡಿಂಗ್ಸ್ ಪುಸ್ತಕದಲ್ಲಿ ಅಚ್ಚಾಗಿದೆ. ಹಾಗಿದ್ದರೂ ಅದನ್ನೆಲ್ಲಾ ಸುಳ್ಳು ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

†ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಗಳೇ, ಅವರು ಟೂರ್ ಪ್ರೋಗ್ರಾಂ ಕಳುಹಿಸದೇ ಇರತಕ್ಕ ವಿಷಯದಲ್ಲಿ ಇಲ್ಲಿ ಮಾತನಾಡುತ್ತಾ ಅದನ್ನು ನಿರಾಕರಿಸಿದ್ದಾರೆ. ಈಗ ನಾನು ಕಳುಹಿಸಿರತಕ್ಕ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಹಾಕಿದರೆ ಇಲ್ಲಿ ಏನೇನು ಹೇಳಿದ್ದೆನೋ ಅದನ್ನೆಲ್ಲಾ ಸಾಬೀತು ಮಾಡತಕ್ಕ ಜವಾಬ್ದಾರಿ ನನಗೆ ಬಿಟ್ಟದ್ದು, ಇದು ಒಂದನೆಯ ವಿಷಯ. ಎರಡನೆಯದಾಗಿ ನಾನು ಮಾಡಿರತಕ್ಕ ಎರಡು ಅಪಾವನೆಗಳನ್ನೂ ನಿರಾಕರಿಸುತ್ತಾ ಮಾನ್ಯ ಮಂತ್ರಿಗಳು ಇತರ ಸಂಬಂಧದಲ್ಲಿ ನಡೆದಿರತಕ್ಕ ವಿಷಯಗಳನ್ನೆಲ್ಲಾ ವರದಿಯಿಂದ ತೆಗೆದುಹಾಕಬೇಕೆಂದು ಕೂಡ ಹೇಳಿದ್ದಾರೆ. ಹಾಗೆ ಮಾಡಕೂಡದು, ಇದೇ ಸಭೆಯಲ್ಲಿ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಜಯ್ಯಶೆಟ್ಟರು ಹಿಂದೆ ಕಳುಹಿಸಿದ ಪ್ರಶ್ನೆಗೆ ಉತ್ತರವಾಗಿ ಅಂದಿನ ನಮ್ಮ ಮೈಸೂರು ಸರ್ಕಾರದವರು ಹೊನ್ನೆಮರಡು ಯೋಜನೆಯಿಂದ ಭಾರತ್ ಟ್ರೇಡಿಂಗ್ ಕಂಪೆನಿಯವರು ಒಂದು ಲಕ್ಷ ಘನ ಅಡಿಗಿಂತಲೂ ಹೆಚ್ಚಾಗಿ ಮರವನ್ನು ಕದ್ದು ಮಾರಿದ್ದಾರೆ ಎಂದು ಹೇಳಿದ್ದಾರೆ, ಇದಕ್ಕಿಂತಲೂ ಹೆಚ್ಚು ಎವಿಡೆನ್ಸ್ ಮಾನ್ಯ ಮಂತ್ರಿಗಳಿಗೆ ಏನು ಬೇಕು ?

ಮಾನ್ಯ ಸಭಾಪತಿಗಳೇ, ಒಂದು ಅಂಶವನ್ನು ಮಾತ್ರ ಒಪ್ಪಿಕೊಳ್ಳಬೇಕಾಗುತ್ತದೆ. ಅವರ ಪಾರ್ಟ್‌ನರ್ಸ್ ನಾಲ್ಕು ಜನರ ಹೆಸ್ರಿಕೆ ಅವರ ಹೆಂಗಸರ ಹೆಸರೂ ಕೂಡ ಇದೆ ಎಂಬುದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ಅದನ್ನು ಪ್ರೊಡ್ಯೂಸ್ ಮಾಡಿ ಎಂದರೆ ಮಾಡುತ್ತೇನೆ. ಪ್ರೊಡ್ಯೂಸ್ ಮಾಡುವುದಕ್ಕೆ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತೇನೆ. ಲಕ್ಕಪ್ಪನವರು ವ್ಯವಹಾರ ಮಾಡಿದ್ದೇ ಬೇರೆ, ಅವರ ಹೆಂಡತಿ ಹೆಸರಿನಲ್ಲಿ ವ್ಯವಹಾರ ಮಾಡಿದರೆ ಬೇರೆ, ಅಂತ ಹೇಳಿ ಈ ರಾಜಕೀಯದಲ್ಲಿ ಭಾವನೆ ಮಾಡುವುದಕ್ಕೆ ಆಗುವುದಿಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ನಾನು ಏನಾದರೂ ಮಾಡಿದ್ದರೆ ಅದೂ ಕೂಡ ನಾನು ಮಾಡಿದ ಅಪರಾಧವೇ, ಅವಳು ಸಹಭಾಗಿನಿ, ಅರ್ಧಾಂಗಿನಿ, ನಮ್ಮ ಹಿಂದೂ ಧರ್ಮ ಕೂಡ ಅದೇ ರೀತಿ ಹೇಳುತ್ತದೆ. ಆದ್ದರಿಂದ ಅವರ ಶ್ರೀಮತಿಯವರ ಹೆಸರಿನಲ್ಲಿ ಅವರು ಪಾಲು ಗೊಂಡಿದ್ದರೆ ಅವರ ಜವಾಬ್ದಾರಿ ಬೇರೆ ಬೇರೆಯಾಗುವುದಿಲ್ಲ. ಶ್ರೀಮಾನ್ ರಾಜಯ್ಯಶೆಟ್ಟರ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ, ಒಂದು ಲಕ್ಷ ಘನ ಅಡಿ ಮರವನ್ನು ಅವರು ಕೊಟ್ಟಿಂಥ ಸ್ಥಳ ಬಿಟ್ಟು ಬೇರೆ ಕಡೆ ಕಡಿದಿದ್ದಾರೆಂದು. ಅವರು ಮಾಡಿರತಕ್ಕ ವ್ಯವಹಾರವನ್ನು ಕ್ರಮ ಬದ್ಧಗೊಳಿಸುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಕೊಟ್ಟಿದ್ದಾರೆ. ಗೊಬ್ಬರ ಕೂಡ ಕದ್ದು ಮಾರಾಟ ಮಾಡಿದ್ದರ ಬಗ್ಗೆ ಚನ್ನಬಸಪ್ಪನವರು ಕೇಸು ಹಾಕಿದ್ದರು. ಅದು ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ ಮಾಯವಾಯಿತು ಎಂದರೆ ಇದಕ್ಕೆ ಯಾರು ಜವಾಬ್ದಾರರು ? ಅವರ ಲಾಯರ್ಯಲ್ಲಿ ಹಾಕಿಕೊಂಡು ಬರುತ್ತಾ ಇದ್ದಂಥ ಗೊಬ್ಬರವನ್ನು ಬೆಂಗಳೂರಿನಲ್ಲಿ ಹೇಗೆ ಹಿಡಿದರು ? ಚಿಕ್ಕಮಗಳೂರಿನಲ್ಲಿ ಹೇಗೆ ಹಿಡಿದರು ? ಅದರ ಮೇಲೆ ಕೇಸು ರಿಜಿಸ್ಟರ್ ಆಗಿರಲಿಲ್ಲವೇ ? ಮಾನ್ಯ ಸಭಾಪತಿಗಳೇ ಈ ನನ್ನ ಮಾತುಗಳನ್ನು ಖುದ್ದು ಜವಾಬ್ದಾರಿಯನ್ನು ಅರಿತು ಹೇಳುತ್ತಾ ಇದ್ದೇನೆ. ಆದ್ದರಿಂದ ನಾನು ಕಳುಹಿಸಿರತಕ್ಕ ಈ ಪ್ರಿವಿಲೇಜ್ ಮೋಷನ್‌ನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಲು ತಾವು ಅವಕಾಶ ಕೊಟ್ಟರೆ ಇಲ್ಲಿ ಮಾತನಾಡಿರತಕ್ಕ ಮಾತುಗಳಿಗೆ ಸೂಕ್ತ ಆಧಾರಗಳ ಮುಖಾಂತರ ಪ್ರೂವ್ ಮಾಡುವುದಕ್ಕೆ ಬದ್ಧನಾಗಿದ್ದೇನೆ ಎಂದು ಹೇಳಿ ಇದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

QUESTION OF PRIVILEGE BY SRI L. SRIKANTAIAH

†ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ ಈ ಸಭೆಯ ಗಮನಕ್ಕೆ ನಾನು ಕಳುಹಿಸಿರತಕ್ಕ ಈ ಹಕ್ಕು ಲೋಪದ ಒಂದು ನಿರ್ಣಯವನ್ನು ಕಳುಹಿಸುತ್ತಲೇ ಇರಲಿಲ್ಲ ಆವರೆ ನಡೆದ ಘಟನೆಯನ್ನು ನೆನೆಸಿಕೊಂಡರೆ ಇದರಿಂದ ಮಹತ್ತರವಾದ ಪರಿಣಾಮವುಂಟಾಗುತ್ತದೆ, ನಾವು ನಮ್ಮ ಕ್ಷೇತ್ರದಲ್ಲಿ ನಮ್ಮ ಕಾರ್ಯಾಚರಣೆಯನ್ನು ಮಾಡುವುದಕ್ಕೆ ತೊಂದರೆಯಾಗುತ್ತಾ, ಇದೆ, ಇದರಿಂದ ನಮ್ಮ ಹಕ್ಕಿಗೆ ಲೋಪ ಬರುತ್ತಾ ಇದೆ ಎಂಬ ಕಾರಣದಿಂದ.....

Mr. SPEAKER —Now, we are having a sort of confusion here. We should approach problems in a sportive spirit. All members ars friends of each other. If the hon'ble member uses good expressions, there would be better unde standing.

(Interruption by Sri Aziz Sait)

Sri Aziz Sait will set up better example. I request the member to behave and create a spirit of cordial atmosphere. After all, we are thinking of parliamentary niceties and these niceties required that we should be equally nice. Otherwise, bitterness will be created. The matter may be stated in a very clear manner which should be pleasing to all ; at least, it should please the Chair who does not belong to any party.

4-30 P.M.

† ಶ್ರೀ ಎಲ್. ಶ್ರೀಕಂಠಯ್ಯ.—ನಾನು ಈ ಘಟನೆಯನ್ನು ಸಭೆಯ ಗಮನಕ್ಕೆ ತರುತ್ತಿರಲಿಲ್ಲ. ಮುಖ್ಯವಾಗಿ ಈ ಘಟನೆಯಿಂದ ಆ ಕ್ಷೇತ್ರದಿಂದ ಚುನಾಯಿತನಾಗಿರುವ ಪ್ರತಿನಿಧಿಯ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿರುವುದರಿಂದ ಆ ಬಗ್ಗೆ ಸದಸ್ಯರ ಹಕ್ಕುಭಾದ್ಯತೆಯೇನು ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಹಕ್ಕುಭಾದ್ಯತೆಯ ಸೂಚನೆಯನ್ನು ನಾನು ತಂದಿದ್ದೇನೆ. ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಯೇ, ಇಲ್ಲವೇ ಎಂಬುದರ ಬಗ್ಗೆ ಸೂಕ್ಷ್ಮವಾಗಿ ನಡೆದ ಘಟನೆಯನ್ನು ತಮ್ಮ ಅವಗಾಹನೆಗೆ ತರುವುದು ಉತ್ತಮ. ನಂಜನಗೂಡು ತಾಲ್ಲೂಕು ಹುಲ್ಲಳ್ಳಿ ಮತ್ತು ರಾಮಪುರ ಗ್ರಾಮಗಳ ಬಳಿ ಸರ್ಕಾರ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಸೇತುವೆ ಮಾಡಿದ್ದಾರೆ. ಅದು ಮುಗಿಯುತ್ತಾ ಬಂದಿದೆ. ನಾಲ್ಕೈದು ತಿಂಗಳಿಂದಲೂ ಆ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಅದರ ಆರಂಭೋತ್ಸವವನ್ನು ನೆರವೇರಿಸಬೇಕೆಂದು ಗ್ರಾಮಸ್ಥರು ನನ್ನ ಹತ್ತಿರ ಹೇಳುತ್ತಿದ್ದರು. ಗ್ರಾಮಸ್ಥರು, ಮುಖ್ಯವಾಗಿ ಪಂಚಾಯಿತಿ ಮುಖಂಡರು ಸಕಾಲದಲ್ಲಿ ಈ ಸೇತುವೆ ಆರಂಭೋತ್ಸವವನ್ನು ನೆರವೇರಿಸಬೇಕು ಎಂದು ಹೇಳುತ್ತಿದ್ದರು ಮತ್ತು ಅದಕ್ಕನುಗುಣವಾಗಿ ಅವರು ಹಣವನ್ನು ಕೂಡ ಶೇಖರಿಸುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಬೇಕಾಗಿರುವಷ್ಟು ಪ್ರಮಾಣದಲ್ಲಿ ಹಣ ಶೇಖರಿಸುವುದಕ್ಕಾಗಲಿಲ್ಲ. ತಾರೀಖು 10–8–1968 ರಲ್ಲಿ ನಾನು ಆ ಕಡೆ ಹೋದಾಗ ನಂಜನಗೂಡು ಸಬ್‌ಡಿವಿಜನ್ ಅಸಿಸ್ಟೆಂಟ್ ಎಂಜಿನಿಯರನ್ನು ಕರೆಸಿ ಹುಲ್ಲಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಈ ವಿಷಯವನ್ನು ಮಾತನಾಡುತ್ತಿದ್ದರು. ನಂಜನಗೂಡು ಎಗ್ಸಿಕ್ಯುಟಿವ್ ಎಂಜಿನಿಯರಿಂದ ಬಂದ ಡಿ.ಓ. ಅಲ್ಲಿ ಓದಿದರು. ಸೇತುವೆ ಕೆಲಸ ಮುಗಿದಿದೆ, ಸೇತುವೆ ಬಳಿ ಇರುವ ವಾಚ್‌ಮನ್ ಹಣ ಪಡೆದು ಬೇಕಾದವರನ್ನು ಸೇತುವೆ ಮೇಲೆ ಹೋಗಲು ಬಿಡುತ್ತಿದ್ದಾನೆ ಈ ಸಂಬಂಧವಾಗಿ ದೂರು ಬರುತ್ತಿದೆ, ಆದುದರಿಂದ ಸೇತುವೆಯಮೇಲೆ ಓಡಾಟಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಂಡು ಒಂದು ಕಾಗದ ಬರೆದು ಅದನ್ನು ಓದಿದರು. ಅದನ್ನು ಓದುತ್ತಿದ್ದಾಗ ಅನೇಕ ಗ್ರಾಮಸ್ಥರು ಅಲ್ಲಿದ್ದರು. ಇಷ್ಟು ದಿವಸ ಹೇಗಿದ್ದರೂ ನಿಧಾನ ಮಾಡಿದೆ, ಕೇವಲ 15 ದಿವಸ ಅವಕಾಶ ಕೊಡಿ, ಹಣ ಬೇಕಾಗಿರುವಷ್ಟನ್ನು ವಸೂಲು ಮಾಡಿ ಹತ್ತಾರು ಸಂಬಂಧಪಟ್ಟ ಗ್ರಾಮಸ್ಥರು ಸೇರಿ ಆರಂಭೋತ್ಸವ ಮಾಡಬೇಕೆಂದಿದ್ದೇವೆ, ತಾವೂ ಕೂಡ ಹೇಳಬೇಕು, ಎಗ್ಸಿಕ್ಯುಟಿವ್ ಎಂಜಿನಿಯರ ಮುಂದೆ ಕೋರಿಕೆ ಇದೆ, ಅವರು ಒಪ್ಪುವಂತೆ ಮಾಡಿ, 24, 25ನೆಯ ತಾರೀಖು ನಾವು ಪ್ರಾರಂಭೋತ್ಸವವನ್ನು ನೆರವೇರಿಸುತ್ತೇವೆ ಎಂದು ನನಗೆ ಹೇಳಿದರು. 25ನೆಯ ತಾರೀಖು ಮಾಡಬಹುದು ಎಂದು ಅಭಿಪ್ರಾಯ ವ್ಯಕ್ತವಾದಾಗ ಪಂಚಾಯಿತಿಯವರು ಸಭೆ ಸೇರಿ ಕಾಗದ ಆ ಸಂಬಂಧವಾಗಿ ಬರೆಸಿ ಎಂದು ಹೇಳಿದೆ. ನಂತರ ಹುಲ್ಲಳ್ಳಿ ಪಂಚಾಯಿತಿಯ ಪ್ರೆಸಿಡೆಂಟ್‌ರು ಪಂಚಾಯಿತಿಯ ನಿರ್ಣಯವನ್ನು ತೆಗೆದುಕೊಂಡು ಮೈಸೂರಿಗೆ ಬಂದರು. ಅದರಲ್ಲಿ ಮಾನ್ಯ ಲಕ್ಕಪ್ಪನವರು ಸೇತುವೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಬೇಕು ಎಂದೂ ಮಾನ್ಯ ಮುಖ್ಯಮಂತ್ರಿಗಳು ಶ್ರೀ ವೀರೇಂದ್ರ ಪಾಟೀಲರು ಈ ಸೇತುವೆಯನ್ನು ಉದ್ಘಾಟನೆ ಮಾಡಬೇಕು ಎಂದೂ ಆ ಬಗ್ಗೆ ಒಂದು ನಿಯೋಗವು ನನ್ನ ನೇತೃತ್ವದಲ್ಲಿ ಸಂಬಂಧಪಟ್ಟವರನ್ನು ಭೇಟಿ ಮಾಡಬೇಕು ಎಂದೂ ನಮೂದಿಸಲಾಗಿತ್ತು, ಆ ನಿರ್ಣಯವನ್ನು ನನ್ನ ಕೈಗೆ ಕೊಟ್ಟರು. ಪಂಚಾಯಿತಿಯು ಒಂದು ನಿರ್ಣಯ ಮಾಡಿ ಆ ಕ್ಷೇತ್ರದ ಸದಸ್ಯರು ನನ್ನ ಬಳಿಗೆ ಬಂದು ಒಂದು ಸಹಾಯ ಕೋರಿದರೆ ಅದನ್ನು ಮಾಡ

(ಶ್ರೀ ಎಲ್. ಶ್ರೀಕಂಠಯ್ಯ)

ಬೇಕಾದ್ದು ನನ್ನ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಅದರ ಪ್ರಕಾರ ಬೆಂಗಳೂರಿಗೆ ಹೋಗೋಣ, ನನಗೆ ಅಲ್ಲಿಗೆ ಹೋಗಬೇಕಾದ ಕೆಲಸವೂ ಇದೆ ಎಂದು ಹೇಳಿದೆ. ಈ ಮಧ್ಯೆ 14 ನೆಯ ತಾರೀಖು ಮಾನ್ಯ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳ ಟೂರ್ ಪ್ರೋಗ್ರಾಂ ಟಪ್ಪಾಲಿನಲ್ಲಿ ಬಂತು. ಅದರಿಂದ ಮಂತ್ರಿಗಳು ಮೈಸೂರಿನಲ್ಲಿ ಜಲದರ್ಶಿನಿಯಲ್ಲಿ ಇಳಿಯುತ್ತಾರೆಂದು ಗೊತ್ತಾಯಿತು. ಅಲ್ಲೇ ಮಂತ್ರಿಗಳನ್ನು ಭೇಟಿ ಮಾಡೋಣ ಎಂದು ಮನಸ್ಸು ಮಾಡಿ ಸಂಬಂಧಪಟ್ಟವರಿಗೆ ವಿಚಾರ ತಿಳಿಸಿದೆ. ಅದರ ಪ್ರಕಾರ ನಾಲ್ಕೈದು ಜನರು ಮೈಸೂರಿಗೆ ಬಂದರು. ಸುಮಾರು 8 ಗಂಟೆಯ ಸಮಯದಲ್ಲಿ ಜಲದರ್ಶಿನಿಯಲ್ಲಿ ಭೇಟಿ ಮಾಡಿದ್ದಾಯ್ತು. ಆಗ ಪಂಚಾಯತಿ ಅಧ್ಯಕ್ಷರು ಇವರು, ಉಪಾಧ್ಯಕ್ಷರು ಇವರು ಸದಸ್ಯರು ಇವರು ಎಂದು ಅವರನ್ನು ಮಂತ್ರಿಗಳಿಗೆ ಪರಿಚಯ ಮಾಡಿಕೊಟ್ಟೆ. ಸೋಮವಾರ ಸೇತುವೆ ಆರಂಭೋತ್ಸವ ನಡೆಸಲು ಅಧ್ಯಕ್ಷತೆ ವಹಿಸಬೇಕೆಂದು ಮಂತ್ರಿಗಳನ್ನು ಕೇಳಿ ಕೊಂಡಾಗ ಅವರು ಅದಕ್ಕೆ ಒಪ್ಪಿದರು. ಆಮೇಲೆ ಅಮಾವಾಸ್ಯೆ ಮಧ್ಯೆ ಬರುತ್ತದೆ, ರಾಹುಕಾಲ ಗುಳಿಕಾಲ ನೋಡಬೇಕು ಎಂದು ಕೆಲವರು ಹೇಳಿದಮೇಲೆ ಕ್ಯಾಲೆಂಡರನ್ನು ತರಿಸಿ ನೋಡಿ ಹನ್ನೊಂದೂವರೆ ಗಂಟೆಗೆ ಮಾಡಬಹುದು, ಪರವಾಗಿಲ್ಲ ಎಂದು ಒಪ್ಪಿಕೊಳ್ಳಲಾಯ್ತು. 25ನೆಯ ತಾರೀಖು ಹನ್ನೊಂದೂವರೆ ಗಂಟೆಗೆ ಬರುವುದಾಗಿ ಮಂತ್ರಿಗಳು ಹೇಳಿದರು. ಆದರೆ ಅವರು ನೀವು ಮುಖ್ಯ ಮಂತ್ರಿಗಳನ್ನೂ ಆಹ್ವಾನಿಸಬೇಕೆಂದಿರುವುದರಿಂದ ಅವರು ಬರಲು ಒಪ್ಪಿದರೆ ನಾನು ಬರುವುದು ಅಪ್ರಕೃತ, ಅವರು ಬಾರದಿದ್ದರೆ ನಾನು ಬರುತ್ತೇನೆ ಎಂದು ಮಂತ್ರಿಗಳು ಹೇಳಿದರು. ಆಮೇಲೆ ಅಲ್ಲಿಂದ ಹೊರಟು ಹೋದೆವು. ಫೋನು ಮಾಡಿ ಮುಖ್ಯ ಮಂತ್ರಿಗಳು ಬೆಂಗಳೂರಿನಲ್ಲಿರುವ ಸಮಯ ತಿಳಿದುಕೊಂಡು ಶುಕ್ರವಾರ ಬೆಂಗಳೂರಿಗೆ ಹೋಗಿ ಮುಖ್ಯ ಮಂತ್ರಿಗಳ ಕೊಠಡಿಯಲ್ಲಿ ಅವರನ್ನು ಭೇಟಿ ಮಾಡಿದೆವು. ಅವರಲ್ಲಿ ವಿಷಯ ಪ್ರಸ್ತಾಪ ಮಾಡಿದಾಗ ತಮಗೆ ಬೇರೆ ಕಾರ್ಯವಿದೆ, ಬರುವುದಕ್ಕಾಗುವುದಿಲ್ಲ, ನಾನು ಶ್ರೀ ಲಕ್ಕಪ್ಪನವರಿಗೆ ಹೇಳುತ್ತೇನೆ, ಅವರನ್ನು ಕರೆದುಕೊಂಡು ಹೋಗಿ ಉದ್ಘಾಟನೆ ಮಾಡಿ ಎಂದು ತಿಳಿಸಿದರು. ಅವರು ಹೇಳಿದಂತೆ ಸೆಕ್ರೆಟೇರಿಯಟ್‌ನಲ್ಲಿ ತಿಳಿಸಿ ಹನ್ನೊಂದೂವರೆ ಗಂಟೆಗೆ ಪ್ರೋಗ್ರಾಂ ಫಿಕ್ಸ್ ಮಾಡಿಕೊಂಡೆವು. ನಂಜನಗೂಡು ಮುನಿಸಿಪಾಲಿಟಿಯ ಅಧ್ಯಕ್ಷರಿಗೆ ಪಬ್ಲಿಕ್ ವರ್ಕ್ಸ್ ಇಲಾಖೆ ಮಂತ್ರಿಗಳು ಬರುತ್ತಾರೆ, ನಂಜನಗೂಡು ಮುನಿಸಿಪಾಲಿಟಿಯವರು ಟೀಗೆ ಅರೇಂಜ್ ಮಾಡಬೇಕು ಎಂದು ತಿಳಿಸಲಾಯ್ತು. ಮುಂದಿನ ಕಾರ್ಯಕ್ರಮ ನಡೆಸಲು ಅಲ್ಲಿವರೆಗೆ ಸುಮಾರು 2 ಸಾವಿರ ರೂಪಾಯಿ ವಸೂಲಾಗಿತ್ತು. ಸುಮಾರು 400 ಜನರಿಗೆ ಅಡಿಗೆ ಏರ್ಪಾಡು ಮಾಡಲಾಯ್ತು. ಆಮೇಲೆ ಅಧ್ಯಕ್ಷತೆ ಯಾರು ವಹಿಸಬೇಕು ಎಂಬ ಪ್ರಶ್ನೆ ಬಂತು. ಆಗ ನಾನು ಅಧ್ಯಕ್ಷತೆ ವಹಿಸುವುದು ಬೇಡ, ಏಕೆಂದರೆ ನಾನು ವಹಿಸಿದರೆ ರಾಜಕೀಯ ಬರಬಹುದು, ಕಾಂಗ್ರೆಸ್ ಮಂತ್ರಿಗಳು ಬರುವಾಗ ಆ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದೆ. ಯಾರಾದರೂ ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳನ್ನು, ಸೂಪರಿಂಟೆಂಡಿಂಗ್ ಎಂಜಿನಿಯರು ಅಥವಾ ಬೇರೆಯವರನ್ನು ಕರೆಸೋಣ ಎಂದು ತೀರ್ಮಾನ ಮಾಡಲಾಯ್ತು. ನಂತರ ಆಹ್ವಾನ ಪತ್ರಿಕೆ ಪ್ರಿಂಟು ಮಾಡಿಸಿ ಅದನ್ನು ಬೇಕಾದವರಿಗೆ ಹಂಚಲಾಯ್ತು. ಆಮೇಲೆ 21 ಅಥವಾ 22ನೆಯ ತಾರೀಖು ಎಗ್ಸಿಕ್ಯುಟಿವ್ ಎಂಜಿನಿಯರು ಫೋನ್ ಮಾಡಿದರು. ಮಾನ್ಯ ಮಂತ್ರಿಗಳು ಸೂಪರಿಂಟೆಂಡಿಂಗ್ ಎಂಜಿನಿಯರಿಗೆ ಫೋನ್ ಮಾಡಿ ಇದನ್ನು ಸರಕಾರಿ ಸಮಾರಂಭ ಎಂದು ಮಾಡಬೇಕು, ಸರ್ಕಾರವೇ ಇದರ ಖರ್ಚನ್ನು ವಹಿಸಬೇಕು, ಅದಕ್ಕೆ ತಕ್ಕಂತೆ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಎಂದು ಫೋರ್ಸ್ ಮಾಡಿದ್ದಾರೆ ಎಂದು ನಮಗೆ ತಿಳಿಸಿದರು. ಅದರ ಅಧ್ಯಕ್ಷತೆಯನ್ನು ಎಂ.ಎಲ್.ಸಿ. ವಹಿಸಬೇಕು, ಶ್ರೀಕಂಠಯ್ಯನವರಿಗೆ ಸ್ವಾಗತ ಕಾರ್ಯ ಕೊಡಬೇಕು ಎಂದು ತಿಳಿಸಿದ್ದರು. ಅದನ್ನು ಫೋನ್ ಮಾಡಿ ತಿಳಿಸಿದರು. ನಾನು ಹೇಳಿದೆ, ನಾನು ಯಾರ ಮನೆಯ ಆಳೂ ಅಲ್ಲ, ಅಥವಾ ನನ್ನನ್ನು ಸ್ವಾಗತಾಧ್ಯಕ್ಷರಾಗಿ ಭಾಷಣ ಮಾಡಿ ಎಂದು ಹೇಳುವುದಕ್ಕೆ ನಾನು ಒಪ್ಪಿಗೆಯನ್ನು ಕೊಟ್ಟಿಲ್ಲ. ನೀವು ಏನು ಬೇಕಾದರೂ ಅಚ್ಚು ಮಾಡುವುದಕ್ಕೆ ನಾನು ಅಡ್ಡಿ ಬರುವುದಿಲ್ಲ, ನೀವು ಮಾಡಿಕೊಳ್ಳಿ. ಎಲ್ಲ ಕಾರ್ಯಗಳೂ ನಡೆದು ಹೋಗಿವೆ, ಆಹ್ವಾನ ಪತ್ರಿಕೆ ಆಚ್ಚಾಗಿದೆ. ಈ ಸಮಯದಲ್ಲಿ ಸರ್ಕಾರದವರೆ ಮಾಡಿದರೆ ಹಳ್ಳಿಯವರು ಗ್ರಾಮಾಂತರ ಪ್ರದೇಶದಲ್ಲಿ ಹೋಗಿ ದುಡ್ಡು ಕೇಳುವುದಕ್ಕೆ ಮುಖ ಚಿಕ್ಕದಾಗುತ್ತದೆ, ಮಾನ ಹೋಗುವಂಥ ಪರಿಸ್ಥಿತಿ ಬರುತ್ತದೆ, ಅವರ ಪರವಾಗಿ ಬಂದವರಿಗೆ ಮಾನ ಮರ್ಯಾದೆ ಬರುವುದಿಲ್ಲ, ಎಂದು ನಾನು ಹೇಳಿದೆ. ಅದಕ್ಕೆ ಅವರು ನಾನು ಏನು ಮಾಡುವುದಕ್ಕಾಗುತ್ತದೆ, ಮೇಲಾಧಿಕಾರಿಗಳ ಆಜ್ಞೆ, ಅದನ್ನು ನಡೆಸಬೇಕು ಎಂದು ಹೇಳಿದರು. 25ನೇ ತಾರೀಖು ಸಮಾರಂಭವು ಮಾನ್ಯ ಎಂ.ಎಲ್.ಸಿ. ಅವರ ಅಧ್ಯಕ್ಷತೆಯಲ್ಲಿ ಆಗಬೇಕೆಂದು ತೀರ್ಮಾನವಾಗಿ ಆ ಸಂದರ್ಭದಲ್ಲಿ ಗರಾಜಿ ಆಗುತ್ತದೆ ಎನ್ನುವ ಶಂಕೆಯಿಂದ ಎರಡು ವ್ಯಾನ್-ರೋಡ್ ಪೋಲೀಸರನ್ನು ಕರೆದುಕೊಂಡು ಬಂದು ಹಳ್ಳಿಯ ಸುತ್ತಲೂ ಕಾವಲು ಹಾಕಿ ಸಮಾರಂಭವನ್ನು ಮಾಡಿದರು. ಗ್ರಾಮಸ್ಥರು

ಇದಕ್ಕೆ ಪ್ರತಿಭಟನೆಯನ್ನು ಯಾವ ರೀತಿ ನಿಲ್ಲಿಸಬೇಕು ಎಂದು ಯೋಚಿಸಿ ಅವರು ಯಾರೂ ಸಮಾರಂಭಕ್ಕೆ ಹೋಗಬಾರದು ಎಂದು ತೀರ್ಮಾನಿಸಿ ಹುಲ್ಲಹಳ್ಳಿಯ ಒಂದು ನಾಯಿಮರಿ ಕೂಡ ಸಮಾರಂಭಕ್ಕೆ ಹೋಗಲಿಲ್ಲ. ದುಡುಕಿ ಏನಾದರೂ ಕೆಲಸ ಮಾಡಿದ್ದರೆ ಫೈರಿಂಗ್ ಆಗಬೇಕಾಗಿತ್ತು. ಮಂತ್ರಿಗಳಿಗೆ ನನ್ನಂಥ ನಾನ್-ಕಾಂಗ್ರೆಸ್ ಸದಸ್ಯನ ಜೊತೆಯಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟವಿಲ್ಲ ವೆಂದು ಕಾಣುತ್ತದೆ, ಕಾಂಗ್ರೆಸ್ಸಿನವರ ಪಕ್ಕದಲ್ಲಿಯೇ ಕುಳಿತುಕೊಳ್ಳಲಿ, ಅದರಿಂದ ನನಗೆ ಅವಮಾನ್ಯಾದೆ ಆಗುವುದಿಲ್ಲ, ದಯವಿಟ್ಟು ಹಳ್ಳಿಯವರು ಯಾವ ವಿಧದಿಂದಲೂ ಗರಾಜೆ ಮಾಡಬೇಡಿ ಎಂದು ಹೇಳಿದೆ. ಆ ದಿನದ ಸಮಾರಂಭ ಪೋಲೀಸ್ ಬಂದೋಬಸ್ತಿನಲ್ಲಿ ನೆರವೇರಿತು. ಅನೇಕ ಜನ ಪೋಲೀಸಿನವರು ಆಮೇಲೆ ಬಂದು ಹಳ್ಳಿಯಲ್ಲಿ ಒಂದು ಲೋಟ ನೀರು ಕೂಡ ಹುಟ್ಟಲಿಲ್ಲ, ಎಷ್ಟು ಬಂದೋಬಸ್ತಾಗಿ ಕಟ್ಟು ಮಾಡಿಕೊಂಡಿದ್ದರು ಎಂದು ಹೇಳಿದರು. ಆ ದಿನ ಹುಲ್ಲಹಳ್ಳಿಯಲ್ಲಿ ಯಾರೂ ಯಾರಿಗೂ ಊಟ ಕೊಡಲಿಲ್ಲ, ಗ್ಯಾಪುಸ್ತರು ಊಟ ಹಾಕಲಿಲ್ಲ. ಎಲ್ಲರೂ ನಂಜನಗೂಡಿಗೆ ಬಂದು ಊಟ ಮಾಡಿಕೊಂಡು ಮೈಸೂರಿಗೆ ಪ್ರಯಾಣ ಮಾಡಿದರು.

ಇದರಿಂದ ನನ್ನ ಹಕ್ಕುಬಾಧ್ಯತೆಗೆ ಲೋಪ ಬಂದಿದೆಯೇ ಎನ್ನುವುದು ಒಂದು ಪ್ರಶ್ನೆ. ಇದರಲ್ಲಿ ಇಂಪ್ರೊಪ್ರೈಟಿ ಆಗುತ್ತದೆ, ಲೋಪ ಬರುವುದಿಲ್ಲ ಎಂದು ತಾವು ಹೇಳಿದಿರಿ.

ಅಧ್ಯಕ್ಷರು.—ನಾನು ಆ ರೀತಿ ಹೇಳಲಿಲ್ಲ. ಒಂದು ವೇಳೆ ಹಾಗೆ ಅರ್ಥವಾಗಬಹುದು ಎಂದು ಹೇಳಿದೆ. ನಾನು ಆ ಒಪಿನಿಯನ್ ಫಾರಂ ಮಾಡಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಇಂಪ್ರೊಪ್ರೈಟಿ ಆಗುತ್ತದೆಯೇ, ಅನಾಗರಿಕ ಅಥವಾ ಸೌಜನ್ಯವಿಲ್ಲದ ಅಥವಾ ಅಸಂಸ್ಕೃತ ನೀತಿಯಿಂದ ಒಬ್ಬನ ಹಕ್ಕುಬಾಧ್ಯತೆಗೆ ಲೋಪ ಬಂದಿದೆಯೇ ಎನ್ನುವ ಪ್ರಶ್ನೆ ಏಳುತ್ತದೆ. ಇದು ಬಹಳ ಸಣ್ಣತನದ ವರ್ತನೆ. ಸಣ್ಣತನದ ವರ್ತನೆ ಸಣ್ಣ ಜನರಲ್ಲಿ ಬರುತ್ತದೆ. ಸಣ್ಣತನದ ಅಥವಾ ದೊಡ್ಡತನದ ಪ್ರಶ್ನೆ ಬೇಡ. ಈ ಒಂದು ನೀತಿಯಿಂದ ನನ್ನ ಕ್ಷೇತ್ರದಲ್ಲಿ ನಾನು ಪ್ರತಿನಿಧಿಯಾಗಿರುವುದಕ್ಕೆ, ನನ್ನ ಕಾರ್ಯವನ್ನು ನಿರ್ವಹಿಸುವುದಕ್ಕೆ ಇದರಿಂದ ಲೋಪ ಬಂದಿದೆ ಎನ್ನುವುದೇ ಮುಖ್ಯವಾದ ಪ್ರಶ್ನೆ.

ಈ ಸಂಬಂಧದಲ್ಲಿ ಇನ್ನೊಂದು ವಿಷಯವನ್ನು ಹೇಳುತ್ತೇನೆ. ತಮಗೂ ಡಾಕ್ಯುಮೆಂಟ್ ಕಳುಹಿಸಿದ್ದೇನೆ. ಸರ್ಕಾರಿ ಅಧಿಕಾರಿಗಳು ಆಮಂತ್ರಣ ಪತ್ರಿಕೆಗಳನ್ನು ಹಂಚುವಾಗ ನಂಜನಗೂಡು ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಸುವುದಕ್ಕೆ ಸಂಬಂಧಪಟ್ಟ ಒಂದು ಪತ್ರಿಕೆಯನ್ನು ಸರ್ಕಾರದವರು ಕಳಿಸಿರುವ ಕವರಿನಲ್ಲಿ ಎಲ್ಲರಿಗೂ ಹಂಚಿದ್ದಾರೆ. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮಂತ್ರಿಗಳು ಸರ್ಕಾರದ ಯಂತ್ರವನ್ನು, ಸರ್ಕಾರದ ಕಾಗದವನ್ನು, ಸರ್ಕಾರದ ಹಣವನ್ನು ಯಾವ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳಬಹುದು ಎನ್ನುವುದಕ್ಕೆ ಡಾಕ್ಯುಮೆಂಟ್ ಸಹ ಕಳುಹಿಸಿಕೊಟ್ಟಿದ್ದೇನೆ. ಪ್ರತಿಯೊಂದು ಆಮಂತ್ರಣ ಪತ್ರಿಕೆಯ ಜೊತೆಯಲ್ಲಿ ಕೂಡ ಅದನ್ನು ಹಂಚಿದ್ದಾರೆ. ಆ ಕವರಿನ ಒಳಗಡೆ ಒಂದು ಸಣ್ಣ ನೋಟೀಸನ್ನು ಇಟ್ಟಿದ್ದಾರೆ. ಅದರಲ್ಲಿ ಹೀಗೆ ಬರೆದಿದೆ : "ನಂಜನಗೂಡು ಬ್ಲಾಕ್ ಕಾಂಗ್ರೆಸ್ ಸಮಿತಿ — ಮೈಸೂರು ರಾಜ್ಯದ ಲೋಕೋಪಯೋಗಿ ಶಾಖಾ ಸಚಿವರಾದ ಕೆ. ಲಕ್ಕಪ್ಪನವರು ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ಭಾಷಣ ಮಾಡುವರು. ತಾವು ಸಕಾಲಕ್ಕೆ ದಯಮಾಡಿ ಭಾಗವಹಿಸಬೇಕಾಗಿ ಕೋರಿಕೆ".

ಈ ಪ್ರಶ್ನೆಯನ್ನು ಏಕೆ ಹೇಳುತ್ತಿದ್ದೇನೆಂದರೆ ಸರ್ಕಾರದ ಯಂತ್ರವನ್ನು ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂಬುದಕ್ಕೆ ಹೇಳುತ್ತಿದ್ದೇನೆ. ನಾನು ಏಕೆ ಮುಂಚಿತವಾಗಿ ಈ ಕಾಗದಪತ್ರಗಳನ್ನು ಕಳುಹಿಸಿಕೊಟ್ಟೆ ಎಂದರೆ ತಾವು ನಿಷ್ಪಕ್ಷಪಾತವಾಗಿ ಈ ಒಂದು ಅಡಳಿತದ ಪಕ್ಷ ಹೇಗೆ ತನಗೆ ಇರತಕ್ಕ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡು ಹೋಗುತ್ತಿದೆ ಎನ್ನುವುದಕ್ಕೆ ಈ ಕಾಗದ ಪತ್ರಗಳನ್ನು ಮುಂಚೆಯೇ ಕಳುಹಿಸಿಕೊಟ್ಟೆ.

ಟೂರ್ ಪ್ರೋಗ್ರಾಂ ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ 'ಟು ಮೀಟ್ ದಿ ಕಾಂಗ್ರೆಸ್ ವರ್ಕರ್ಸ್ ಆಫ್ ನಂಜನಗೂಡ್' ಎಂದಿದೆ; ಸೈಕ್ಲೋಸ್ಟೈಲ್ ಅದ ಆ ಕಾಪಿಗಳು ವಿಧಾನಸೌಧದಲ್ಲಿ ತಯಾರಾಗಿವೆ. ನಂಜನಗೂಡಿನಲ್ಲಿ ಬೇರೆ ಪಕ್ಷಗಳು ಯಾವುವೂ ಇಲ್ಲವೇ? 'ಟು ಮೀಟ್ ದಿ ಕಾಂಗ್ರೆಸ್ ಪಾರ್ಟಿ — 10-45' ಎಂದು ಇದೆ. ಇವರು ಖಾಸಗಿಯಾಗಿ ಎಲ್ಲಿಗಾದರೂ ಬರಲಿ, ಅದಕ್ಕೆ ನನ್ನ ಅಭ್ಯಂತರವಿಲ್ಲ; ಊಟ ಮಾಡಲು ನನ್ನ ಅಭ್ಯಂತರವಿಲ್ಲ. ಆದರೆ ಸರ್ಕಾರಿ ಕಾಗದ ಪತ್ರದಲ್ಲಿ 'ಟು ಮೀಟ್ ಕಾಂಗ್ರೆಸ್ ವರ್ಕರ್ಸ್' ಎಂದು ಸೇರಿಸಬೇಕಾದರೆ ಅದಕ್ಕೆ ಖರ್ಚು ಕೊಡುವವರು ಯಾರು? ಏಕೆ ಎರಡು ನಿದರ್ಶನಗಳನ್ನು ಕೊಟ್ಟು ಕಾಗದಗಳನ್ನು ಕೊಟ್ಟೆ ಎಂದರೆ ದುರುಪಯೋಗ ಯಾವ ರೀತಿಯಲ್ಲಿ ಸುಲಭವಾಗಿ ನಡೆಯುತ್ತಿದೆ ಎಂದು ತೋರಿಸುವುದಕ್ಕೆ.

(ಶ್ರೀ ಎಲ್. ಶ್ರೀಕಂಠಯ್ಯ)

ಈಗ ನಡೆದಿರುವ ಘಟನೆಗಳಿಂದ ಪ್ರಿವಿಲೇಜ್ ಬ್ರೀಚ್ ಆಗುತ್ತದೆಯೇ ಎನ್ನುವ ಪ್ರಶ್ನೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಇದಕ್ಕೆ ಒಂದೆರಡು ಅಥಾರಿಟಿ ಸ್ಟೇಟ್ ಮಾಡುತ್ತೇನೆ.

I will read from More's Practice and Procedure of Indian Parliament.

Mr. SPEAKER.—If that is the authority, the member has already given it to me and now he need not read it.

Sri L. SRIKANTAIAH.— In the first place, let us know the distinction between 'right' and 'privilege'.

Mr. SPEAKER. The member can just underline and pass it on to me.

Sri L. SRIKANTAIAH.—Why I said is for this reason. Actually it does not amount to breach of privilege in one sense. But the privilege as is defined and understood in May's Parliamentary Practice is much more than what is understood by right. I will read:

> "Every duty has a corresponding right. The Legislators individually and collectively have to discharge, as seen in the preceding section, many duties and obligations and consequently they have also many rights and privileges individually as well as collectively. In the words of Sir Erskine May 'Parliamentary privilege is the sum of the peculiar rights enjoyed by each House collectivly as a constituent part of the High Court of Parliament, and by members of each House individually, without which they could not discharge their functions, and which exceed those possessed by other bodies or individuals.' Thus privilege, though part of the law of the land, is to a certain extent an exemption from the ordinary law."

The stress is, such distinction is made between right and privilege. Where there is no right cast on the minister to accept the invitation, that is not a point on which there is a dispute. The question is whether the member who is elected from the constituency by his conduct is prevented from discharging his duty towards his constituency. That is important for consideration. I shall read another paragraph that amounts to privilege:

> "What is a breach of privilege is a question which does not admit of a precise and categorical answer. Breach of privilege cannot be defined though it can be described. It may be stated generally that any act or omission which obstructs or impedes either House of Parliament in the performance of its functions, or which obstructs or impedes any member or officer of such House in the discharge of his duty, or which as a tendency, directly or indirectly, to produce such results may be treated as a contempt even though there is no precedent of the offence. To put it more tersely, 'a breach of privilege is a wilful disregard by a member or any other person of the

lawful powers and privileges of Parliament'. It was a fairly good description, that a breach would be where someone was bringing the House into contempt or ridicule."

Now let us recapitulate what has happened. Would not this conduct amount to ridicule of a member elected from that constituency? With what sense of trust they came to me? It may be countered by saying "You had no business to lead the delegation." For what else is a member meant? I deem it my duty to do so when members of Panchayat and Taluk Board come to me and request me saying "You please lead this delegation". Suppose I refuse, what would be the consequence? They will think, "Here is a member elected by this constituency who has not got the capacity to contact a Minister and extend an invitation to him." So, I had to agree to lead the delegation.

Now let us take the other question. I went under the impression that the Minister has responded to my kind invitation and will grace the occasion. Later on, it turns out that a particular Congress member of that particular constituency goes and tells him: "Don't accept the invitation of this member; he is a non-Congressman." Accordingly instructions are sent out and I am boycotted from that function. What will be the reflection on my standing in that constituency? Why I am stressing this aspect is to show that ridicule is there. People can argue openly: ಇವನ ಕೈಯ್ಯಲ್ಲಿ—ಈ ಮುತ್ಸದ್ದಿ ಕೈಯಲ್ಲಿ ಏನು ಆಗುತ್ತದೆ? ಒಬ್ಬ ಮಂತ್ರಿಗಳನ್ನು ಕರೆದುಕೊಂಡು ಬರುವುದಕ್ಕಾಗುವುದಿಲ್ಲ. That lowering of my prestige, that ridicule is writ large in the sky. One can read even while running. This is the aspect where the breach of privilege comes in. Your Honour may ask me to cite precedents, but Mr. Speaker, Sir, I would say that for all these things there cannot be a precedent. As Sir Erskine May has rightly pointed out, it can be described and taking all the circumstances into consideration, it has to be judged whether this particular conduct has affected the rights, functions and duties of an elected member of a constituency. Why I am stressing this aspect is because incidentally from this strange conduct six things follow. By implication all these things follow:

(1) Is it laid down in the Constitution that a constituency has no right to elect a member who does not belong to the Congress?

(2) In case a constituency elects a non-Congress candidate, should the people of that constituency be looked upon as suspects in the eyes of the Government? Is it written in the Consti tution?

(3) Should Ministers of the Government who belong to the Ruling Party attend to the needs of a constituency only when approached through members of the Congress Party?

(4) Should the people of a constituency be subjected to victimisation for electing a non-Congressman?

(5) Is it that all non-Congress M.L.A.s are ineffective members and their existence is only nominal and at the mercy of the ruling party?

(SRI L. SIRKANTAIAH)

(6) Can a Minister of the Ruling Party by virtue of his position and power make use of the Government machinery to sub-serve his private and party ends to the detriment of the duties and functions of an elected member of a constituency ?

I am placing all these facts for the kind consideration of the Chair that as defined in May's Parliamentary Practice it is not merely a question of impropriety but it is a question of having a broader angle. Suppose I were the Minister and he was the hon'ble member elected from that constituency and suppose he had been placed in the same position as I was, how would he have felt it ? So let us reverse the position. After all, human feelings are one and the same whether it emerges from the Hon'ble Minister or from myself. Viewed from this angle, Mr. Speaker, how would he have felt it ?

MR. SPEAKER.—I shall consider it.

SRI L. SRIKANTAIAH.—This is the aspect I am stressing and it is for the kind consideration of the Chair. It is for the Chair to judge: ಅನಾಗರಿಕ, ಅಸಂಸ್ಕೃತ ಮತ್ತು ಸೌಜನ್ಯರಹಿತ ಜನತೆಗೆ ಹೇಳಿದಂಥ ವರ್ತನೆ ಈ ಚುನಾಯಿತ ಪ್ರತಿನಿಧಿಗಳಿಗೆ ಬರುತ್ತದೋ ಇಲ್ಲವೋ ?

MR. SPEAKER.—The House has very attentively heard the hon'ble member Sri Srikantaiah. The House may extend the same attention to the statement to be made by the Hon'ble Minister Sri K.Lakkappa.

† ಶ್ರೀ ಕೆ. ಲಕ್ಕಪ್ಪ.—ಸಭಾಪತಿಗಳೇ, ಮಾನ್ಯ ಸದಸ್ಯರು ಈ ಪ್ರಿವಿಲೇಜ್ ಮೋಷನ್ ನಭೆಯ ಮುಂದೆ ಇಡುತ್ತಾ ಸುದೀರ್ಘವಾದ ವಿವರಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವರು ಹೇಳಿದ ಹಾಗೆ ನಾನು ಮೈಸೂರಿನಲ್ಲಿ ಕ್ಯಾಂಪು ಮಾಡಿದಾಗ ಶ್ರೀಮಾನ್ ಶ್ರೀಕಂಠಯ್ಯನವರು ಮತ್ತು ಹುಲ್ಲಳ್ಳಿಯ ಕೆಲವು ಜನ ಬಂದು ನನ್ನನ್ನು ಭೇಟಿ ಮಾಡಿದರು. ಭೇಟಿ ಮಾಡಿ ನಮ್ಮ ಊರು ಬಳಿ ಒಂದು ಸೇತುವೆ ಕಟ್ಟಿ ಮುಗಿದಿದೆ ಅದು ಇನ್ನೂ ಪ್ರಾರಂಭೋತ್ಸವ ಆಗದೇ ಇರುವ ಕಾರಣ ಅಲ್ಲಿ ಅಡ್ಡಮರಗಳನ್ನು ಹಾಕಿ ವಾಹನಗಳನ್ನು ಓಡಾಡಿಸುವುದಕ್ಕೆ ಅವಕಾಶ ಕಲ್ಪಿಸಿಲ್ಲ. ಇದನ್ನು ಓಪನ್ ಮಾಡದೇ ಇದ್ದ ಪಕ್ಷದಲ್ಲಿ ಅಲ್ಲಿ ಸಂಚಾರಕ್ಕೆ ತೊಂದರೆಯಾಗುತ್ತದೆ. ತಾವು ಕೂಡಲೇ ಬಂದು ಅಲ್ಲಿ ಓಪನ್ ಮಾಡಬೇಕು ಎಂದು ಹೇಳಿದರು. ಅಗತ್ಯವಾಗಿ ಆಗಲಿ ಎಂದು ನಾನು ಹೇಳಿ ಒಪ್ಪಿ ಕೊಂಡದ್ದು ನಿಜ. ಈ ಮಾತನ್ನು ಹೇಳಿದ ಮೇಲೆ ಮುಖ್ಯಮಂತ್ರಿಗಳು ಸಹ ಬಂದರೆ ಒಳ್ಳೆಯದು ಅವರನ್ನೂ ಕರೆಯುತ್ತೇವೆ ಎಂದು ಹೇಳಿದರು. ನಾನು ಹೇಳಿದೆ ಅವರು ಏನಾದರೂ ಬಂದರೆ ಅವರು ಒಬ್ಬರೇ ಸಾಕು, ಇಬ್ಬರು ಮಂತ್ರಿಗಳು ಬರುವುದು ಅನಗತ್ಯ. ನಾನು ಬರುವುದು ಅಗತ್ಯ ಇಲ್ಲ ಎಂದು ಅವರು ಬರುವುದಕ್ಕೆ ಅನಿವಾರ್ಯವಾದರೆ, ನಾನು ಅದರ ಪ್ರಾರಂಭೋತ್ಸವವನ್ನು ನೆರವೇರಿಸುತ್ತೇನೆ ಎಂದು ಹೇಳಿದೆ. ಮಾತನಾಡತಕ್ಕಂಥ ಕಾಲದಲ್ಲಿ ಆ ಸಮಾರಂಭವನ್ನು ಊರಿನ ಜನರು ಮಾಡಬೇಕೇ, ಅಥವಾ ಸರ್ಕಾರದ ವತಿಯಿಂದ ನಾವೇ ಮಾಡಬೇಕೇ ಯಾವ ಪ್ರಸ್ತಾಪವೂ ಬರಲಿಲ್ಲ. ಇದರ ಪ್ರಶ್ನೆಯೇ ಉದ್ಭವಿಸಲಿಲ್ಲ. ಅನಂತರ ಮುಖ್ಯಮಂತ್ರಿಗಳನ್ನು ಕೇಳಿದಾಗ ಇಬ್ಬರು ಸಚಿವರು ಬರುವುದು ಅನಗತ್ಯ ಶ್ರೀ ಲಕ್ಕಪ್ಪನವರು ಬಂದು ಓಪನ್ ಮಾಡುತ್ತಾರೆಂದು ಹೇಳಿದರು. ಆ ರೀತಿ ನನಗೆ ಒಂದು ಚೀಟಿಯೂ ಬಂತು. ನಾನು ತಿಳಿದುಕೊಂಡ ಮಟ್ಟಿಗೆ ಸರ್ಕಾರ ಕಟ್ಟಿದಂಥ ದೊಡ್ಡ ದೊಡ್ಡ ಜಲಾಶಯಗಳು, ಸೇತುವೆಗಳು, ನಮ್ಮ ಪಿ. ಡಬ್ಲ್ಯು. ಡಿ. ವತಿಯಿಂದ ಈ ಸಮಾರಂಭವನ್ನು ನಡೆಸುತ್ತಾರೆಂದು ಗೊತ್ತಿತ್ತು. ಅದರ ಪ್ರಕಾರ ಈ ಸಮಾರಂಭವನ್ನು ಪಿ.ಡಬ್ಲ್ಯು. ಡಿ. ಮುಖಾಂತರ ನಡೆಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ತಿಳಿಸಿದೆ. ಅದರಂತೆ ಅವರು ಈ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಇದೇ ಸಂದರ್ಭದಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರೂ ನಾವು ಬರುತ್ತೇವೆ ಎಂದು ತಿಳಿದುಕೊಂಡು, ನಂಜನಗೂಡು ಮುನಿಸಿಪಾಲಿಟಿಯವರು

ನನ್ನನ್ನು ಬರಮಾಡಿಕೊಂಡು ರೆಪ್ರೆಸೆಂಟೇಷನ್ ಕೊಡಬೇಕೆಂದಿದ್ದಾರೆ. ನಾನು ಒಪ್ಪಿಗೆ ಕೊಡಬೇಕು ಎಂದರು. ನಾನು ಅಗತ್ಯವಾಗಿ ಬರುತ್ತೇನೆ. 11½ ಗಂಟೆಯಲ್ಲಿ ಕಾರ್ಯಕಲಾಪ ಮುಗಿಸಿ, ಸಕಾಲಕ್ಕೆ ಹೋಗುವ ರೀತಿಯಲ್ಲಿ ನನ್ನನ್ನು ಜಾಗ್ರತೆಯಾಗಿ ಕಳುಹಿಸಿಕೊಡಿ ಎಂದು ಹೇಳಿದೆ. ಆ ರೀತಿ ಮುನಿಸಿಪಾಲಿಟಿಯಲ್ಲಿ ಯಾವ ಸಮಾರಂಭ ಇತ್ತೋ ಆ ಸಮಾರಂಭಕ್ಕೆ ಹೋಗಿ ಭಾಗವಹಿಸಿ ರೆಪ್ರೆಸೆಂಟೇಷನ್ ತೆಗೆದುಕೊಂಡು ನಾನು ಹೇಳಬೇಕಾಂದಥ ವಿಷಯವನ್ನು ಹೇಳಿ ಬಂದಿದ್ದೇನೆ. ಶ್ರೀಮಾನ್ ಶ್ರೀಕಂಠಯ್ಯನವರಿಗೆ ವಿರೋಧವಾಗಿ ವರ್ತಿಸಿದ್ದರೆ ನಾನು ಹೋಗುತ್ತಲೇ ಇರಲಿಲ್ಲ. ನಮ್ಮ ಪರಿಸ್ಥಿತಿ ಹೀಗೆ ಇದೆ ಎಂದು ಒಂದು ಸಲ ಅವರ ಮುಂದೆ ನಿವೇದನೆ ಮಾಡಿದ್ದೇನೆ. ಕಾಂಗ್ರೆಸ್ ಆಫೀಸಿನಿಂದಲೂ ಒಂದು ಪತ್ರ ಬಂದಿದೆ. ಅದುದರಿಂದ ನಿಮಗೋಸ್ಕರವಾಗಿ ನಾನು ಬೆಳಗ್ಗೆ 8½ ಗಂಟೆಗೆ ಬೆಂಗಳೂರನ್ನು ಬಿಡುವ ಬದಲು 6½ ಘಂಟೆಗೆ ಹೊರಡಬೇಕಾಗುತ್ತೆ. ನನ್ನನ್ನು ಬೇಗ ಕಳುಹಿಸಬೇಕು ಎಂದು ಹೇಳಿದೆ. ಅದರ ಪ್ರಕಾರ ಈ ಎರಡು ಕಾರ್ಯಕ್ರಮಗಳನ್ನೂ ಒಪ್ಪಿಕೊಂಡು ನಾನು ಈ ಕೆಲಸವನ್ನು ಮುಗಿಸಿಕೊಂಡು ಬರಬೇಕಾಯಿತು.

5-00 P.M.

ಈ ಮಧ್ಯೆ ಶ್ರೀಕಂಠಯ್ಯನವರು ನನಗೆ ಒಂದು ಪತ್ರವನ್ನು ಬರೆದರು. ಆ ಪತ್ರಕ್ಕೆ ನಾನು ಒಂದು ಉತ್ತರವನ್ನು ಸಹ ಕೊಟ್ಟಿದ್ದೇನೆ. ಅದು ಈ ರೀತಿ ಇದೆ :

> "I am in receipt of your letter dated 22-8-1968. Opening functions of bridges are always arranged by our department. When you and your friends approached me when I was at Mysore, I thought you people voluntarily came forward to co-operate with us and to assist us. For this I was glad. Usually the Superintending Engineers of the Division will welcome the invitees and the chief guest. I instructed the Superintending Engineer of the Division to give you an important role in the function. I do not know how you think otherwise. I hope with a spirit of goodwill you will co-operate with us."

ಹೀಗೆ ಬರೆದೆ. ನಮ್ಮ ಇರಾಖೆಯಲ್ಲಿ ಸ್ವಾಗತ ಮಾಡತಕ್ಕಂತಹ ಮಾಮೂಲಿ ಪದ್ಧತಿ ಇದ್ದರೂ ಶ್ರೀಮಾನ್ ಶ್ರೀಕಂಠಯ್ಯನವರು ಬಹಳ ಆಸಕ್ತಿ ವಹಿಸಿದ್ದುದನ್ನು ನಾನು ಕಂಡೆ. ಅವರಿಗೂ ಸಮಾರಂಭದಲ್ಲಿ ಅವಕಾಶ ಇರಲಿ, ತಾವು ಇದರಲ್ಲಿ ಭಾಗವಹಿಸಿ, ಸ್ವಾಗತವನ್ನು ಮಾಡಬೇಕು ಎನ್ನುವ ಮಾತನ್ನು ಅವರಲ್ಲಿ ಹೇಳಿದ್ದೇನೆ, ಪತ್ರದಲ್ಲೂ ಹೇಳಿದ್ದೇನೆ. ಇದರಿಂದ ನಿಜಾಂಶ ಯಾವ ರೀತಿಯಲ್ಲಿ ಹೇಳಿದ್ದೇನೆಂಬುದು ಗೊತ್ತಾಗುತ್ತದೆ. ಅವರಿಗೆ ಚ್ಯುತಿಬರುವ ಹಾಗೆ ಮಾಡಿಲ್ಲ. ಅವರು ಬೇರೆ ಬೇರೆ ಅಪಾರ್ಥಗಳನ್ನು ಮಾಡಿಕೊಂಡು ತಪ್ಪು ಅಭಿಪ್ರಾಯಗಳನ್ನು ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಸರ್ಕಾರದ ಅಧಿಕಾರಿಯಾಗಿ, ಕಾಂಗ್ರೆಸ್ ಪಕ್ಷದವನಾಗಿ ಎಲ್ಲಿ ರೆಪ್ರೆಸೆಂಟೇಶನ್ ಕೊಡಬೇಕಾಗಿದೆ,ಇಂಥ ಕಾರ್ಯಕ್ಕೊಸ್ಕರ ಬರಬೇಕೆಂದರೆ ಕರೆದರೆ, ಅದು ಕಾಂಗ್ರೆಸ್ಸಿನದ್ದಾಗಲಿ, ಅಥವಾ ಇತರ ಕಾರ್ಯಗಳಾಗಲಿ, ಸಮಯ ಇದ್ದರೆ ಬೇಳೆ ಇದ್ದರೆ, ಒಪ್ಪಿಕೊಳ್ಳತಕ್ಕದ್ದು ಸಾಧುವಾದುದ್ದು, ಮತ್ತು ಅದರಲ್ಲಿ ಯಾವ ಪ್ರಿವಿಲೆಜ್ ಪ್ರಶ್ನೆಯೂ ಇಲ್ಲ ಮತ್ತು ಯಾವ ಪ್ರಿವಿಲೆಜ್ ಬರುವ ಸಂಭವವೂ ಇಲ್ಲವೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. P. GANGADHAR.—May I know whether a Minister is entitled to use Government machinery to meet the Congress workers ?

Mr. SPEAKER.—The hon. Member has not followed the proceedings.

Sri H. N. NANJE GOWDA.—Mr. Speaker.....

Mr. SPEAKER.—I have not called the non. Member to speak.

Sri H. N. NANJE GOWDA.—It is my privilege to talk as a member and it is our privilege to participate in the business. It is not only Sriyuths Srikantiah and Lakkappa who are concerned; we are all concerned. When discussion is going on about his behaviour, he is walking away and the Speaker does not ask him to remain here. I wonder whether this is the way in which we are to be treated here.

Sri B. P. GANGADHAR.—The walking away of the Minister when a matter concerning him is being discussed is a sheer contempt of the House.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಏಕೆ ಸ್ವಾಮಿ, ಈ ಚರ್ಚೆಗೆ ಸಂಬಂಧಪಟ್ಟ ಮಂತ್ರಿಗಳು ಈ ಸಭೆಯಿಂದ ಓಡಿಹೋದರು?

Mr. SPEAKER.—A Member can speak when he is called upon to speak and not otherwise. I have not called upon the Hon'ble Member to speak.

Sri H. SIDDAVEERAPPA.—Sir, the House has already discussed about this and had a deliberation over this.

Mr. SPEAKER.—The House had neither discussed nor had a deliberation.

†Sri H. SIDDAVEERAPPA.—The House had heard about it. You may put it in any way, but the whole point is this. It shows, if at all our friends on the other side are not insensitive—I hope so—to the feelings of this Side of the House as to how all feel about such things; if they want to create an impression like that, that is a different matter and I am not entering into the merits of it. I think, we have forcefully pleaded the case, as forcefully as we can. The other Side also has pleaded its case. There is the country to judge what it all means. Over and above all that, you, Sir as our custodian, custodian of the rights, privileges and the prerogatives of this House, I am sure, like the great Speakers who have adorned the Chairs both in the State and elsewhere, will consider all these facts and give a Ruling which will safeguard the interests of this House—I have no doubt about it. When once the Ruling is given, we are bound to bow down. I am pleading with my friends to put a stop to this subject. We have made our case clear and we need not take it further. I plead with them to stop further discussion on this.

Mr. SPEAKER.—Hon'ble Member Sri Siddaveerappa has correctly stated the position. I have heard the statement by Sri L. Srikantiah and the other statement made by the Hon'ble Minister for Public Works Sri K. Lakkappa. I shall consider both the statements very carefully. Let it be known that it was not a debate. The Hon'ble member and the Hon'ble Minister were allowed to make the statements to enable me to give my consent to raise the matter of privilege I shall very carefully go through the statements recorded here and after a thorough consideration I shall give my Ruling on the subject without fear or favour. I very much regret that there was so much emotion in the House.

I now call upon Sri Gangabovi to make his statement. Hon'ble Member Sri Gangabovi is not here, though he was requested to be present after Tea interval, when I called him earlier also he was absent. It is not proper on the part of the Members to be absent when they are requested to be present, and come to the House at their sweet will and pleasure ? As a matter of strict observance of discipline, I shall permit Sri Gangabovi to make his statement only tomorrow, not today.

Sri K. H. RANGANATH.— It would be better if the Hon'ble Deputy Minister for Home is also present tomorrow.

Mr. SPEAKER.— Hon'ble Deputy Minister for Home, Sri Manik Rao, will be also present tomorrow to make his statement on the subject.

I shall give my Ruling regarding the Notifications issued by the Minister for Development tomorrow. Day-after-tomorrow I shall give my Ruling regarding the Adjournment Motion given notice of by Hon'ble members, Sriyuths T. R. Shamanna, Vatal Nagaraj and M. S. Krishnan. And, regarding the matter now discussed, I shall give my Ruling either on Monday or Tuesday. With this I go to the next item on the Agenda.

Sri AZIZ SAIT.—Sir, I had given a charge-sheet against the Minister through the Speaker to the then Chief Minister, Sri S. Nijalingappa, in his capacity as the Leader of the House. At that time, the Deputy Speaker Sri D. Manjunath was in the Chair. I want to know what has happened to it.

Mr. SPEAKER.—I shall find out the position.

MYSORE LEGISLATURE SALARIES (AMENDMENT) BILL, 1968

Motion to Consider

Mr. SPEAKER.—The Mysore Legislature Salaries (Amendment) Bill, 1968 may be taken up first and the Mysore Ministers Salaries and Allowances (Amendment) Bill, 1968, may be taken up tomorrow.

I request the Hon'ble Minister for Parliamentary Affairs to move the Bill.

Sri K. PUTTASWAMY (Minister for Labour).—Sir, I beg to move:

"That the Mysore Legislature Salaries (Amendment) Bill, 1968, be taken into consideration."

Mr. SPEAKER.—Motion moved:

"That the Mysore Legislature Salaries (Amendment) Bill, 1968, be taken into consideration."

Sri K. PUTTASWAMY.—Sir, according to the existing Act no provision is made for payment of salaries or emoluments to the Deputy Speaker when he functions as Speaker. Similarly, no provision is made